ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ
ದಿನಾಂಕ : DATE 21/10/20



## ಕೊರತೆ ನೀಗಿಸಲು ಆರೋಗ್ಯ ಇಲಾಖೆ ಹೊಸ ಉಪಕ್ರಮ | ಹತ್ತು ಘಟಕಗಳಿಗೆ ಟೆಂಡರ್

# ಆಸ್ಪತ್ರೆಗಳಲ್ಲೇ ಆಕ್ಸಿಜನ್ ಉತ್ಪಾದನಾ ಘಟಕ

■ ಆರ್. [illegible] ಮಂಗಳೂರು
ravichandra.balekkale@timesgroup.com

ಆಕ್ಸಿಜನ್ ಕೊರತೆ ನೀಗಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕೆಲವು ಪ್ರಮುಖ ಸರಕಾರಿ ಆಸ್ಪತ್ರೆಗಳಲ್ಲೇ ಆಕ್ಸಿಜನ್ ಉತ್ಪಾದನಾ ಘಟಕಗಳನ್ನು ಸ್ಥಾಪಿಸಲು ಮುಂದಾಗಿದೆ.

ಬೆಂಗಳೂರು ಕಂದಾಯ ವಿಭಾಗದ 2, ಮೈಸೂರು ಕಂದಾಯ ವಿಭಾಗದ 2, ಕಲಬುರ್ಗಿ ಕಂದಾಯ ವಿಭಾಗದ 3 ಹಾಗೂ ಬೆಳಗಾವಿ ಕಂದಾಯ ವಿಭಾಗದ 3 ಜಿಲ್ಲಾ ಆಸ್ಪತ್ರೆ ಸೇರಿ ಒಟ್ಟು 10 ಆಕ್ಸಿಜನ್ ಘಟಕಗಳು ಹೆಚ್ಚುವರಿಯಾಗಿ ನಿರ್ಮಾಣವಾಗಲಿದೆ. ಈ ಹತ್ತೂ ಘಟಕಗಳಲ್ಲಿ ಪಿಎಸ್‌ಎ ತಂತ್ರಜ್ಞಾನ ಬಳಸಿ ತಲಾ 500 ಎಲ್‌ಪಿಎಂ ಘಟಕಗಳು ನಿರ್ಮಾಣವಾಗಲಿದೆ. ಮುಂದೆ ಇದೇ ಘಟಕಗಳಿಂದ ಅಗತ್ಯ ಇರುವ ಸರಕಾರಿ ಆಸ್ಪತ್ರೆಗಳಿಗೆ ಆಕ್ಸಿಜನ್ ಸಿಲಿಂಡರ್‌ಗಳು ಪೂರೈಕೆಯಾಗಲಿವೆ.

**9 ಕೋಟಿ ರೂ. ವೆಚ್ಚ:** ಬೆಂಗಳೂರು ಮತ್ತು ಮೈಸೂರು ಕಂದಾಯ ವಿಭಾಗದಲ್ಲಿ ತಲಾ 1.80 ಕೋಟಿ ರೂ. ವೆಚ್ಚದಲ್ಲಿ ಹಾಗೂ ಕಲಬುರಗಿ ಹಾಗೂ ಬೆಳಗಾವಿಯಲ್ಲಿ ತಲಾ 2.70 ಕೋಟಿ ರೂ. ಸೇರಿ ಒಟ್ಟು 9 ಕೋಟಿ ರೂ. ವೆಚ್ಚದಲ್ಲಿ ಘಟಕ ನಿರ್ಮಾಣವಾಗಲಿದೆ. ಈ ಬಗ್ಗೆ ಟೆಂಡರ್ ಆಹ್ವಾನಿಸಲಾಗಿದ್ದು, ಎರಡು ತಿಂಗಳಲ್ಲಿ ಘಟಕ ನಿರ್ಮಾಣ ಷರತ್ತು ವಿಧಿಸಲಾಗಿದೆ.

ಬ್ರಿಟಿಷ್ ಕಾಲದಲ್ಲಿ ನಿರ್ಮಾಣವಾದ ಆಸ್ಪತ್ರೆಗಳಲ್ಲಿ ಈಗಾಗಲೇ ಆಕ್ಸಿಜನ್ ಉತ್ಪಾದನಾ ಘಟಕಗಳು ಕಾರ್ಯನಿರ್ವಹಿಸುತ್ತಿವೆ. ಆದರೆ ಹಲವು ಆಸ್ಪತ್ರೆಗಳಲ್ಲಿ ಘಟಕಗಳೇ ಇಲ್ಲ, ಖಾಸಗಿ ಅಥವಾ ಬದಲಿ ಕೈಗಾರಿಕಾ ಬಳಕೆಯ ಆಕ್ಸಿಜನ್ ಸಿಲಿಂಡರ್‌ಗಳನ್ನೇ ಅವಲಂಬಿಸಬೇಕಾಗಿತ್ತು. ಭವಿಷ್ಯದಲ್ಲಿ ಇಂತಹ ಸಮಸ್ಯೆಗಳು ಬಾರದಂತೆ ಮಾಡುವ ಉದ್ದೇಶದಿಂದ ಈಗ, ಆಸ್ಪತ್ರೆಗಳಲ್ಲೇ ಉತ್ಪಾದನಾ ಘಟಕ ತೆರೆಯಲು ಇಲಾಖೆ ಮುಂದಾಗಿದೆ.

**20.09.2020**

**ವಿಜಯ ಕರ್ನಾಟಕ**




**ಮುಂದಿನ ದಿನಗಳಲ್ಲಿ ಆಸ್ಪತ್ರೆಗಳಲ್ಲಿ ಆಕ್ಸಿಜನ್ ಕೊರತೆ ಉಂಟಾಗದಂತೆ ತಡೆಯುವ ನಿಟ್ಟಿನಲ್ಲಿ ಕಡಿಮೆ ಉತ್ಪಾದನೆ ಸಾಮರ್ಥ್ಯ ಇರುವ ಆಸ್ಪತ್ರೆಗಳಲ್ಲಿ ಸಂಗ್ರಹಣಾ ಸಾಮರ್ಥ್ಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕ್ರಮ ವಹಿಸಲಾಗಿದೆ.**

**-ಶ್ರೀರಾಮುಲು** ರಾಜ್ಯ ಆರೋಗ್ಯ ಸಚಿವ

## ಆಕ್ಸಿಜನ್ ಇಲ್ಲದೆ ಉದ್ಯಮ ಘಟಕಗಳ ಒದ್ದಾಟ

**ಹುಬ್ಬಳ್ಳಿ/ಮಂಗಳೂರು:** ಕೊರೊನಾದಿಂದ ಆಕ್ಸಿಜನ್ ಸಿಲಿಂಡರ್‌ಗಳೆಲ್ಲಾ ಆಸ್ಪತ್ರೆ ಪಾಲಾಗುತ್ತಿವೆ. ಇದರಿಂದ ಗ್ಯಾರೇಜ್, ಪೀಠೋಪಕರಣ, ಕಪಾಟು, ಅಲ್ಯುಮಿನಿಯಂ ಕೈಗಾರಿಕೆ, ಫ್ಯಾಬ್ರಿಕೇಶನ್, ರೂಫಿಂಗ್ ಘಟಕಗಳಿಗೆ ಪ್ರಾಣವಾಯುವಿಲ್ಲದೆ ಏದುಸಿರು ಬಿಡುತ್ತಿವೆ. ಆಕ್ಸಿಜನ್ ಸಿಲಿಂಡರ್ ಪೂರೈಸುವ ಏಜೆನ್ಸಿಗಳು ಆಕ್ಸಿಜನ್ ಸಿಲಿಂಡರ್‌ಗಳನ್ನು ಕಡ್ಡಾಯವಾಗಿ ಆಸ್ಪತ್ರೆಗಳಿಗೆ ಒದಗಿಸುವಂತೆ ಆದೇಶ ಹೊರಡಿಸಿರುವುದರಿಂದ ಈಗ ಪರದಾಟ ಶುರುವಾಗಿದೆ.

### ಕೈಗಾರಿಕೆಗಳಿಗೆ ಭಾರಿ ಕೊರತೆ

ಆಕ್ಸಿಜನ್ ವಿತರಣಾ ಘಟಕಗಳು ಶೇ.90ಕ್ಕಿಂತ ಹೆಚ್ಚಿನ ಪ್ರಮಾಣದ ಆಮ್ಲಜನಕವನ್ನು ಆಸ್ಪತ್ರೆಗಳಿಗೆ ನೀಡುತ್ತಿವೆ. ಆಕ್ಸಿಜನ್ ಮೇಲೆ ಅವಲಂಬಿತವಾದ ಸ್ಟೀಲ್, ಶುಗರ್, ಹೈಡ್ರಾಲಿಕ್ ಮೆಷಿನ್‌ನಂತಹ ದೊಡ್ಡ ದೊಡ್ಡ ಇಂಡಸ್ಟ್ರಿಗಳು ಆಕ್ಸಿಜನ್ ಕೊರತೆ ಎದುರಿಸುತ್ತಿವೆ. ಆಕ್ಸಿಜನ್ ಉತ್ಪಾದನೆ ಮಾಡುವ ತೋರಣಗಲ್‌ನ ಜಿಂದಾಲ್, ಕೊಪ್ಪಳದ ಕಲ್ಯಾಣಿ ಸ್ಟೀಲ್ ಫ್ಯಾಕ್ಟರಿಗಳನ್ನು ಬಿಟ್ಟರೆ ಉಳಿದ ಶೇ. 95ರಷ್ಟು ದೊಡ್ಡ ಉದ್ಯಮಗಳು ಆಕ್ಸಿಜನ್ ಇಲ್ಲದೇ ನಲುಗಿ ಹೋಗಿವೆ. ಇದು ಸಹಜವಾಗಿ ಈ ಕ್ಷೇತ್ರವನ್ನು ನಂಬಿರುವ ಕಾರ್ಮಿಕ, ಕಚ್ಚಾ ವಸ್ತು ಪೂರೈಕೆ, ಸಾರಿಗೆ ಸೇರಿ ಅನೇಕ ವಲಯಗಳ ಮೇಲೆ ದುಷ್ಪರಿಣಾಮ ಬೀರಿದೆ.

**ನಿತ್ಯ 1500 ಟನ್ ಉತ್ಪಾದನೆ:** ರಾಜ್ಯದ ಎಂಟು ಆಕ್ಸಿಜನ್ ಕೇಂದ್ರಗಳಲ್ಲಿ ಸುಮಾರು 1200-1500 ಟನ್ ಲಿಕ್ವಿಡ್ ಆಕ್ಸಿಜನ್ ಉತ್ಪಾದನೆ ಆಗುತ್ತಿದೆ. ಕೋವಿಡ್‌ಗೂ ಮುನ್ನ ಒಟ್ಟು ಉತ್ಪಾದನೆಯ ಶೇ. 20-22ರಷ್ಟು ಆಸ್ಪತ್ರೆಗೆ ಬಳಕೆ ಆಗುತ್ತಿತ್ತು. ಉಳಿದ ಶೇ. 70-75ರಷ್ಟು ಕೈಗಾರಿಕೆಗಳಿಗೆ ಬಳಸಲಾಗುತ್ತಿತ್ತು. ಇದೀಗ ಶೇ. 90ರಷ್ಟು ಆಸ್ಪತ್ರೆಗಳಿಗೆ ಬಳಕೆಯಾಗುತ್ತಿದೆ.

ಏಳು ಕ್ಯುಬಿಕ್ ಮೀಟರಿನ ಸಿಲಿಂಡರಿಗಿದ್ದ 500 ರೂ. ದರ 600ರೂ. ಗಳಿಗೇರಿದೆ. ಗುಜರಿ ಅಂಗಡಿಗಳಲ್ಲಿ ಸ್ಕ್ರ್ಯಾಪ್ ಕಟ್ಟಿಂಗಿಗೂ ಆಕ್ಸಿಜನ್ ಸಿಲಿಂಡರ್ ಅಗತ್ಯವಿದ್ದು ಉಡುಪಿ ಜಿಲ್ಲೆ ಮಾತ್ರವಲ್ಲ ರಾಜ್ಯದ ಸಾವಿರಾರು ಗ್ಯಾರೇಜು ಸಹಿತ ವೆಲ್ಡಿಂಗ್ ಶಾಪ್‌ಗಳಿಗೆ ಆಕ್ಸಿಜನ್ ಕೊರತೆ ಶಾಪವಾಗಿ ಪರಿಣಮಿಸಿದೆ.

### ಆಕ್ಸಿಜನ್ ಏಕೆ ಬೇಕು?

ಬೆಂಕಿಯ ಜ್ವಾಲೆ ಹೆಚ್ಚಿಸಲು, ಸ್ಟೀಲ್ ಕತ್ತರಿಸಲು ಮತ್ತು ವೆಲ್ಡಿಂಗ್‌ಗೆ ಅಗತ್ಯ ರಸಾಯನಿಕ, ಔಷಧಗಳು, ಕಾಗದ ಹಾಗೂ ಪೆಟ್ರೋಲಿಯಂ ಪ್ರಕ್ರಿಯೆಯಲ್ಲಿ ಆಕ್ಸಿಜನ್ ಒಂದು ಕಚ್ಚಾವಸ್ತು

**ಕೊರೊನಾ ಹಿನ್ನೆಲೆಯಲ್ಲಿ ಆಕ್ಸಿಜನ್ ಬೇಡಿಕೆ ಹೆಚ್ಚಾಗಿದೆ. ಆದರೆ, ಉತ್ಪಾದನೆ ಅಷ್ಟೇ ಇದೆ. ಹಾಗಾಗಿ ಮೊದಲು ಜೀವ ಉಳಿಸುವ ಕೆಲಸ ಮಾಡಬೇಕಿದೆ. ನಂತರ ಇಂಡಸ್ಟ್ರಿಗಳಿಗೆ ಪೂರೈಸಲಾಗುತ್ತಿದೆ.**

**-ಜಗದೀಶ ಶೆಟ್ಟರ್** ಕೈಗಾರಿಕಾ ಸಚಿವ